ಅ) ನವ ಮಂಗಳೂರು ಬಂದರು ಪ್ರಾಧಿಕಾರದವರು ಇಲ್ಲಿ ಮೀನುಗಾರಿಕಾ ಬಂದರು ನಿರ್ಮಾಣದ ಬಗ್ಗೆ ಸಾಧಕ - ಭಾಧಕಗಳನ್ನು ಪರಿಶೀಲಿಸುತ್ತಿದ್ದು ಇದಕ್ಕೆ ಬೇಕಾಗಿರುವ ಮಾಹಿತಿಗಳನ್ನು ಒದಗಿಸಲಾಗಿದೆ.

ಇ) ಸಂತ್ರಸ್ಥ ಮೀನುಗಾರರಿಗೆ ಮಂಗಳೂರು ಹಳೆ ಬಂದರಿನಲ್ಲಿ ಒಂದು ಪ್ರತ್ಯೇಕ ಸಣ್ಣ ಮೀನುಗಾರಿಕಾ ಬಂದರನ್ನು ನಿರ್ಮಿಸಲಾಗಿದೆ.

ನಾಗರಹೊಳೆ ಅರಣ್ಯದಲ್ಲಿ ಬೆಂಕಿ ಅಪಘಾತ ಸಂಭವಿಸಿರುವುದು

520 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ ಆಗಾಗ್ಗೆ ಬೆಂಕಿ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇತ್ತೀಚೆಗೆ ಆ ರೀತಿ ಸಂಭವಿಸಿದ ಪ್ರಕರಣಗಳು ಯಾವುವು?

ಇ) ಈ ಅನಾಹುತಗಳು ನಡೆಯಲು ವಿಶೇಷ ಕಾರಣಗಳೇನಾದರೂ ಇವೆಯೇ?

ಈ) ಅವುಗಳನ್ನು ತಡೆಗಟ್ಟಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಬೆಂಕಿ ಅನಾಹುತ ಈ ಕೆಳಗೆ ತಿಳಿಸಿದ ಅರಣ್ಯ ಪ್ರದೇಶಗಳಲ್ಲಿ ಆಗಿರುತ್ತದೆ.

1) ನಾಗರಹೊಳೆ ರಾಷ್ಟ್ರೀಯ ಉದ್ಯಾನವನ

2) ಬಂಡೀಪುರ ರಾಷ್ಟ್ರೀಯ ಉದ್ಯಾನವನ

3) ಭದ್ರಾ ಅಭಯಾರಣ್ಯ

4) ಶೆಟ್ಟಿಹಳ್ಳಿ ಅಭಯಾರಣ್ಯ

5) ಬಿಳಿಗಿರಿರಂಗಸ್ವಾಮಿ ದೇವಸ್ಥಾನ ಅಭಯಾರಣ್ಯ

ಇ) ಹೌದು

ಈ) ಕಾಡಿಗೆ ಬೆಂಕಿ ಬೀಳುವುದನ್ನು ತಡೆಗಟ್ಟಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಕಿ ನಿರೋಧಕ ವಾಹನಗಳ ನೇಮಕ, ಬೆಂಕಿ, ಲೈನುಗಳನ್ನು ಎಳೆಯುವುದು, ಬೆಂಕಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಹಾಲಿನ ಡೈರಿಯಲ್ಲಿ ನಷ್ಟ

549 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮದರ್ ಡೈರಿಯು ಸೇರಿದಂತೆ ಯಾವ ಯಾವ ಜಿಲ್ಲಾ ಹಾಲು ಒಕ್ಕೂಟಗಳು ನಷ್ಟವನ್ನು ಅನುಭವಿಸುತ್ತಿವೆ?

ಆ) ಯಾವ ಯಾವ ವರ್ಷಗಳಿಂದ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ವಿವಿಧ ಜಿಲ್ಲಾ ಹಾಲು ಒಕ್ಕೂಟಗಳು ಅನುಭವಿಸುತ್ತಿವೆ. (ಮದರ್ ಡೈರಿಯೂ ಸೇರಿದಂತೆ)

ಇ) ಅದಕ್ಕೆ ಕಾರಣಗಳೇನು ಮತ್ತು ಈ ನಷ್ಟವನ್ನು ತಪ್ಪಿಗಟ್ಟಲು ಸರ್ಕಾರದ ಮುಂದಿರುವ ಕ್ರಮಗಳೇನು?

ಈ) ನಷ್ಟದಲ್ಲಿರುವ ಹಾಲು ಒಕ್ಕೂಟಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಕೆ.ಎಸ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1992-93ನೇ ಸಾಲಿನಲ್ಲಿ ನಷ್ಟದಲ್ಲಿರುವ ಹಾಲು ಒಕ್ಕೂಟಗಳ ವಿವರ ಈ ಕೆಳಕಂಡಂತಿದೆ.

1) ಮದರ್ ಡೈರಿ, 2) ಮೈಸೂರು 3) ತುಮಕೂರು 4) ಹಾಸನ
5) ಬೆಳಗಾಂ 6) ಬಳ್ಳಾರಿ 7) ಮಂಡ್ಯ 8) ಬಿಜಾಪುರ,
9) ಧಾರವಾಡ

ಆ) ವಿವರಗಳನ್ನು ಅನುಬಂಧ - ಅ ನಲ್ಲಿ ನೀಡಲಾಗಿದೆ.

ಇ) ನಷ್ಟಕ್ಕೆ ಕಾರಣಗಳು :

1) ಹಾಲು ಉತ್ಪನ್ನಗಳಿಗೆ ಕಡಿಮೆ ಮಾರುಕಟ್ಟೆ ಬೇಡಿಕೆ ಮತ್ತು ಬೆಲೆ

2) ಮಡಿಯುವ - ಬಂಡವಾಳದ ಮೇಲಿನ ಬಡ್ಡಿ ಪಾವತಿ.

3) ವಿದ್ಯುತ್ ಇಂಧನ ಮತ್ತು ಸಾಗಾಣಿಕೆ ದರಗಳಲ್ಲಿ ಹೆಚ್ಚಳ.

4) ಹಾಲಿನ ಸುಗ್ಗಿ ಕಾಲದಲ್ಲಿ ಹಾಲಿನ ಉತ್ಪಾದಕರಿಗೆ ಹೆಚ್ಚಿನ ಶೇಖರಣಾ ದರ.

5) ಗ್ರಾಹಕರಿಗೆ ಪೂರೈಯಾಗದಂತೆ ಹಾಲಿನ - ಮಾರಾಟ ಬೆಲೆಯನ್ನು ಹೆಚ್ಚಿಸದೇ ಇರುವುದು.

ನಷ್ಟವನ್ನು ತಪ್ಪಿಗಟ್ಟಲು ತೆಗೆದುಕೊಂಡಿರುವ ಕ್ರಮಗಳು

1) ಹಾಲಿನ ಮತ್ತು ಹಾಲು ಉತ್ಪನ್ನಗಳ ಮಾರುಕಟ್ಟೆಯನ್ನು ಹೆಚ್ಚಿಸುವುದು.

2) ಮೇಲು ಖರ್ಚುಗಳನ್ನು ಕಡಿಮೆಗೊಳಿಸುವುದು.

3) ಮುಂಬರುವ ಚೇಸಿಗೆಯಲ್ಲಿ ಹಾಲು ಉತ್ಪನ್ನಗಳ ಬೆಲೆ ಹೆಚ್ಚುವ ಸಂಭವ.

ಈ) ಇಲ್ಲ.

ಅನುಬಂಧ - ಅ

ಹಾಲು ಒಕ್ಕೂಟಗಳು (ಮದರ್ ಡೈರಿಯನ್ನೊಳಗೊಂಡಂತೆ) 1987-88ರಿಂದ 1992-93ನೇ ಸಾಲಿನವರೆಗೆ ಅನುಭವಿಸಿದ ನಷ್ಟದ ಬಗೆಗಿನ ಪಟ್ಟಿ

(ರೂ. ಲಕ್ಷಗಳಲ್ಲಿ)

ಒಕ್ಕೂಟ	1987-88	1988-89	1989-90	1990-91	1991-92	1992-93
ಬೆಂಗಳೂರು	-	68.09	-12.63	79.85	78.00	28.79
ಕೋಲಾರ	7.64	8.97	1.90	18.84	21.54	21.33
ಮೈಸೂರು	-12.16	-14.21	18,68	-18.67	-44.12	-104,59
ತುಮಕೂರು	4.69	-13.61	55.99	-329.98	9.55	-240.18
ಗುಲ್ಬರ್ಗಾ	-18.18	-22.44	17.96	-8.06	-24.00	23.14
ಶಿವಮೊಗ್ಗ	-	-8.65	-0.07	0.37	-46.66	-6.01
ಧಾರವಾಡ	-	26.63	02.83	-231.94	-87.20	-181.34
ಮಂಡ್ಯ	2.52	20.52	-128.64	-57 .12	36.52	-32.19
ಹಾಸನ	-51.83	-43.62	-43.51	2.41	14.00	-21.50
ದಕ್ಷಿಣ ಕನ್ನಡ	6.37	-9.50	19.03	-26.12	-36.80	14.01
ಬೆಳಗಾಂ	-14.57	0.38	-10.17	-27.13	1.95	-76.56
ಬಳ್ಳಾರಿ	-44.60	-12.93	-54.54	-20.96	-1.66	-76.29
ಬಿಜಾಪರ	-1.24	-1.05	-1.95	-5.10	-49.39	-141.06
ಮದರ್ ಡೈರಿ	-23.59	3.36	41.43	51.49	64.65	-24.12

ಟಿಪ್ಪಣಿ : (-) ನಷ್ಟದ ಗುರುತು.